ಅದನ್ನು ಗುರುತು ಹಾಕಿಕೊಂಡ.

"ಒಂದೆರಡು ದಿನಗಳ ಕಾಲ ನಾನು ಆತನ ಬಗ್ಗೆ ಯೋಚಿಸ್ತಾ ಇದ್ದೆ. ಆಮೇಲೆ ಮರೆತೇ ಬಿಟ್ಟೆ. ಈಗ್ಗೆ ಕೆಲವು ದಿನಗಳ ಹಿಂದೆ ಇನ್ನೊಬ್ಬ ಬಂದಿದ್ದ. ಫ್ಲಾಟ್ ಕ್ಯಾಪ್ ಧರಿಸಿದ್ದ ಮನುಷ್ಯ. ಸ್ಯಾಮುಯೆಲ್ ಅಂತ ಅವ್ನ ಹೆಸರು. ಕಲಾಕೃತಿಗಳನ್ನು ಕೊಳ್ಳೋದಿಕ್ಕೆ ಅಂತ ಬಂದಿದ್ದೇನೆ ಅಂತಂದ. ಆದ್ರೆ ಅವ್ನಿಗೆ ನನ್ನ ಬಳಿ ಆಂಟಿಕ್ ಇರೋದು ಹೇಗ್ ಗೊತ್ತಾಯ್ತು? ನನ್ನ ಆ ಪ್ರಶ್ನೆಗೆ ಆತ ಹಾರಿಕೆಯ ಉತ್ತರ ನೀಡ್ದ. ಅದು ಗೊತ್ತಾಗಿ ನನ್ಗೂ ಆಗಬೇಕಾದ್ದೂ ಏನೂ ಇರಲಿಲ್ಲ. ಮತ್ತು ಆ ವೇಳೆಗಾಗ್ಲೇ ನಾನು ಹೆಚ್ಚಿನದ್ದನ್ನೆಲ್ಲಾ ಕಾವೇರಿ ಎಂಪೋರಿಯಂಗೆ ಮಾರಾಟ ಮಾಡಿಯಾಗಿತ್ತು. ಅದನ್ನ ಕೇಳಿ ಅವ್ನು ಕೈ ಕೈ ಹಿಸುಕಿಕೊಂಡು ಹೋದ. ಖಾಸಗಿಯವರಿಗೆ ಕೊಟ್ಟಿದ್ರೆ ಹೆಚ್ಚು ದರ ಸಿಕ್ತಿತ್ತೇನೂ ಅಂತ ನನ್ಗೂ ಅನ್ನಿಸಿತು. ಆದ್ರೆ ಆವಾಗ ತಡವಾಗಿತ್ತು. ಯಾವುದಕ್ಕೂ ಅದೃಷ್ಟ ಬೇಕು."

"ಚಿದಾನಂದ ಹೋದ ಜಾಗ ಎಲ್ಲಾ ಒಮ್ಮೆ ನೋಡಬಹುದೆ?"

"ಧಾರಾಳವಾಗಿ. ನಾನು ಆತನ ಹಿಂಬಾಲಕರೊಂದಿಗೆ ಮಾತಾಡುವಾಗ ಅವ್ನು ಆಂಟಿಕ್ ಇರಿಸಿದ್ದ ಪಕ್ಕದ ಕೋಣೆಯಲ್ಲಿ ಅಡಗಿದ್ದ. ಅಷ್ಟೇ. ಆಮೇಲೆ ಹಿಂದಿನ ಬಾಗಿಲಿಂದ ಹಾರಿಹೋದ. ಅವ್ನು ಹೋದ ದಾರಿ ನಿಮ್ಗೆ ತೋರಿಸ್ತೀನಿ."

ಮಂದ ಬೆಳಕು ಹರಡಿದ್ದ ಆ ಕೊಠಡಿಯಲ್ಲಿ ಕೆಲವು ಹಳೆಯ ಕಲಾಕೃತಿಗಳು ಇನ್ನೂ ಇದ್ದವು. ಗಡಿಯಾರ, ಟೆಲಿಫೋನ್, ದೀಪದ ಬುಡ್ಡಿ ಇತ್ಯಾದಿ. ಅಲ್ಲಿಂದ ಒಂದು ಬಾಗಿಲು ಸಣ್ಣ ವಂಕಕ್ಕೆ ತೆರೆದುಕೊಳ್ಳುತ್ತಿತ್ತು. ಅದಕ್ಕೆ ಚಾಚಿಕೊಂಡು ಎರಡು ಕೊಠಡಿಗಳು, ಅದರ ಇನ್ನೊಂದು ತುದಿಯಲ್ಲಿ ಹೊರಹೋಗುವ ಬಾಗಿಲು.

ಕರಮಚಂದ ಅಲ್ಲೆಲ್ಲಾ ಬಹಳ ತನ್ಮಯತೆಯಿಂದ ಹುಡುಕಾಟಕ್ಕೆ ತೊಡಗಿದ. ನಾನು ಚಾರ್ಲಿಯೊಡನೆ ಆ ಹಳೆಯ ಗಡಿಯಾರದ ಬಗ್ಗೆ ವಿಚಾರಿಸತೊಡಗಿದೆ. ಕರಮಚಂದ ಮನೆಯೊಳಗಿಡೀ ಸುತ್ತು ಹಾಕುವುದನ್ನು ನಾನು ಚಾರ್ಲಿಯೊಡನೆ ಸಂಭಾಷಣೆಯಲ್ಲಿ ನಿರತನಾಗಿದ್ದಾಗಲೂ ಗಮನಿಸ್ದೆ. ಇದ್ದಕ್ಕಿದ್ದಂತೆ, ಕರಮಚಂದ ಮನೆಯ ಹಿಂಭಾಗದಿಂದ ಗಟ್ಟಿಯಾಗಿ ಕೂಗಿ, ಚಾರ್ಲಿಯನ್ನು ಕರೆದ. ನಾವಿಬ್ಬರೂ ಆತುರದಿಂದ ಹಿಂದೆ ಧಾವಿಸಿದೆವು.

"ಚಾರ್ಲಿ, ನೀವು ಸೇದುವ ಸಿಗರೇಟು ಬ್ರಾಂಡ್ ಯಾವ್ದು?"

"ಕರಮ್‌ಚಂದ್, ನಾನು ಸಿಗಾರ್ ಸೇದೋದು!"

"ಹೌದೆ?... ಓಹ್!!"

ಕರಮಚಂದ ಎಡಕ್ಕೆ ಚಲಿಸಿ, ಒಂದು ಕಿಟಕಿಯ ಮುಂದೆ ನಿಂತ. ಅದು ಆಂಟಿಕ್ ಇರಿಸಿದ್ದ ಕೋಣೆಯ ಕಿಟಕಿ.

"ಚಾರ್ಲಿ, ಹಾಗಿದ್ರೆ ಕನಿಷ್ಠ ಇನ್ನೂ ಒಬ್ಬನು ಇಲ್ಲಿಗೆ ಬಂದಿದ್ದ. ಅವ್ನು ಇಲ್ಲಿ ಬಹಳ ಹೊತ್ತು ನಿಂತಿದ್ದ. ನೋಡಿ ಇಲ್ಲಿ, ಆಳವಾದ ಶೂಗಳ ಗುರುತುಗಳು. ನೀವು ಹೆಚ್ಚಾಗಿ ಮನೆ ಹಿಂಭಾಗಕ್ಕೆ ಬರೋದೇ ಇಲ್ಲ ಅನ್ನೋದು ನೋಡಿದ ಕೂಡಲೇ ಗೊತ್ತಾಗುತ್ತೆ. ಒಟ್ಟಾರೆಯಾಗಿ ಬೆಳೆದ ಹುಲ್ಲು, ಗಿಡಗಳು, ರಾಶಿ ಬಿದ್ದ ಕಸಕಡ್ಡಿ! ಹಾಗಾಗಿ ಇಲ್ಲಿ ಮೂಡಿರೋದು ನಿಮ್ಮ ಹೆಜ್ಜೆ ಗುರುತು ಆಗಿರಲಿಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಜನಸಂಚಾರ ಇಲ್ಲದ್ದರಿಂದ ಈ ಗುರುತುಗಳು ಇನ್ನೂ ಉಳಿದಿವೆ. ಆ ಮನುಷ್ಯ ಸಿಗರೇಟು ಎಳೆದು, ಬೂದಿ ಇಲ್ಲಿ ಕೊಡವಿದ್ದಾನೆ. ಇಲ್ಲಿ ನೋಡಿ, ಅಸ್ಪಷ್ಟ ಗುರುತುಗಳು. ಅವು ಈ ಪಾಗಾರದ ಸನಿಹದಿಂದ ಮೂಡಿವೆ... ಇಲ್ಲೇ ಅವನು ಕಾಂಪೌಂಡ್ ಒಳಗೆ ಜಿಗಿದ ಜಾಗ. ಬೂಟುಗಾಲಿನ ಗುರುತು ತುಂಬಾ ಆಳವಾಗಿದೆ. ನೀವು ಯಾರಾದ್ರೂ ಅಪರಿಚಿತರು ನಿಮ್ಮನ್ನ